# DPUE

# KANNADA

# NOTES

DPUE

# 3. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು

- ಕುಮಾರವ್ಯಾಸ

ಅ. ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು.

1. ಎನ್ನವೊಲು ಮುನ್ನಾರು ನವೆದವರುಂಟು.

ಪ್ರಸ್ತುತ ವಾಕ್ಯವನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿದ ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ದ್ರೌಪದಿ ಸ್ವಗತದಲ್ಲಿ ನುಡಿದಳು.

ಪಾಂಡವರ ಅಜ್ಞಾತವಾಸದ ಸಂದರ್ಭದಲ್ಲಿ ದ್ರೌಪದಿ 'ಸೈರಂಧ್ರಿ' ಯಾಗಿ ಸುದೇಷ್ಣೆಯ ದಾಸಿಯಾಗಿರುತ್ತಾಳೆ. ಆ ಸಂದರ್ಭದಲ್ಲಿ ಸುದೇಷ್ಣೆಯ ತಮ್ಮ ಕೀಚಕನಿಂದ ತೊಂದರೆಗೆ ಒಳಗಾಗುತ್ತಾಳೆ. ಒಮ್ಮೆಯಂತೂ ಕೀಚಕ ಕಾಲಿನಿಂದ ಒದೆದು ಅವಮಾನಿಸುತ್ತಾನೆ. ಕೀಚಕನ ಉಪಟಳವನ್ನು ತಾಳಲಾರದೆ ತೀವ್ರ ಸಂಕಟಕ್ಕೆ ಒಳಗಾದ ದ್ರೌಪದಿ 'ಯಾರನ್ನು ಸಮೀಪಿಸಲಿ? ಯಾರ ಬಳಿ ಹೇಳಲಿ? ನನ್ನಂತೆ ಈ ಹಿಂದೆ ಯಾರು ನರಳಿದ್ದಾರೆ?' ಎಂದು ರೋಧಿಸುತ್ತಾಳೆ.

ತೀವ್ರ ದುಃಖಕ್ಕೊಳಗಾದ ದ್ರೌಪದಿಯ ಸಂಕಟವು ಈ ವಾಕ್ಯದಲ್ಲಿ ವ್ಯಕ್ತವಾಗಿದೆ.

2. ಯಮಸುತರಂಗರುಹುವೆನೆ ಧರ್ಮಕ್ಷಮೆಯ ಗರ ಹೊಡೆದಿಹುದು.

ಪ್ರಸ್ತುತ ವಾಕ್ಯವನ್ನು…ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿದ ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ದ್ರೌಪದಿ ಸ್ವಗತದಲ್ಲಿ ಹೇಳುವಳು.

ಪಾಂಡವರ ಅಜ್ಞಾತವಾಸ ಸಂದರ್ಭದಲ್ಲಿ ವಿರಾಟರಾಜನ ಅರಮನೆಯಲ್ಲಿ ಇದ್ದ ದ್ರೌಪದಿಯು ಕೀಚಕನ ಉಪಟಳ ತಾಳಲಾರದೆ ಸಂಕಟಪಡುತ್ತಾ ಅಳುವಳು. ದುಃಖವನ್ನು ತೋಡಿಕೊಂಡು ಸೂಕ್ತ ಪರಿಹಾರ ಪಡೆಯಲು ತನ್ನ ಗಂಡಂದಿರ ಸಹಾಯ ಪಡೆಯಲು ಯೋಚಿಸುವಳು. ಯಮಸುತನಾದ ಧರ್ಮರಾಯನಲ್ಲಿ ತನ್ನ ಸಂಕಟವನ್ನು ತೋಡಿಕೊಂಡರೆ ಖಂಡಿತ ಪರಿಹಾರ ಸಿಗದು. ಆತನಿಗೆ ಧರ್ಮಕ್ಷಮೆಯ ಗ್ರಹ ಬಡಿದಿದೆ ಎಂದು ಆಲೋಚಿಸುವಳು.

ಸಂಕಟದ ಸಮಯದಲ್ಲಿಯೂ ಪರಿಹಾರ ಕಂಡುಕೊಳ್ಳಲು ತೋರುವ ಚಿಂತನಾ ಸಾಮರ್ಥ್ಯವನ್ನು ಧ್ವನಿಸುತ್ತದೆ. 2

3. ಕಲಿಭೀಮನೇ ಮಿಡುಕುಳ್ಳ ಗಂಡನು

ಪ್ರಸ್ತುತ ವಾಕ್ಯವನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿದ ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ.

ಪ್ರಸ್ತುತ ವಾಕ್ಯವನ್ನು ದ್ರೌಪದಿ ತನ್ನಲ್ಲಿ ಹೇಳಿಕೊಳ್ಳುತ್ತಾಳೆ.

ಪಾಂಡವರ ಅಜ್ಞಾತವಾಸಕಾಲದಲ್ಲಿ ವಿರಾಟರಾಜನಲ್ಲಿ ವೇಷಮರೆಸಿಕೊಂಡು ಬದುಕುತ್ತಿರುವ ಸಂದರ್ಭದಲ್ಲಿ ದ್ರೌಪದಿಯು ಕೀಚಕನ ತೊಂದರೆಯನ್ನು ತಾಳಲಾಗದೆ ತನ್ನ ದುಃಖವನ್ನು ತೋಡಿ ಸೂಕ್ತ ಪರಿಹಾರ ಕಂಡುಕೊಳ್ಳಲು ಸೂಕ್ತರಾದ ಪತಿಗಳೈವರ ಬಗ್ಗೆ ತರ್ಕಿಸುತ್ತಾ ಪರಾಕ್ರಮಿಯಾದ ಭೀಮ ಮಾತ್ರ ಮಿಡಿಯುವ ಹೃದಯವುಳ್ಳವನು ಎಂಬ ತೀರ್ಮಾನಕ್ಕೆ ಬರುತ್ತಾಳೆ.

ದುಃಖದ ಸಂದರ್ಭದಲ್ಲಿ ಚಿತ್ತ ಸ್ಥಿಮಿತವನ್ನು ಕಳೆದುಕೊಳ್ಳದೆ ತರ್ಕಿಸುವ ದ್ರೌಪದಿಯ ಸಾಮರ್ಥ್ಯ ವ್ಯಕ್ತವಾಗಿದೆ.

4. ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ

ಪ್ರಸ್ತುತ ವಾಕ್ಯವನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿದ ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ.

ಪ್ರಸ್ತುತ ವಾಕ್ಯವನ್ನು ದ್ರೌಪದಿ ಸ್ವಗತದಲ್ಲಿ ಹೇಳುವಳು.

ಅಜ್ಞಾತವಾಸದ ಸಂದರ್ಭದಲ್ಲಿ ಕೀಚಕನ ಉಪಟಳದಿಂದ ತೀವ್ರ ಸಂಕಟಕ್ಕೆ ಒಳಗಾದ ದ್ರೌಪದಿ ಭೀಮ ತನ್ನ ಬಗ್ಗೆ ಕಾಳಜಿ ಉಳ್ಳವನು, ಸಹಾಯ ಮಾಡುತ್ತಾನೆ ಎಂದು ಚಿಂತಿಸುತ್ತಾಳೆ. ಆತನಲ್ಲಿ ಕೀಚಕನನ್ನು ಸಂಹರಿಸುವ ಕೆಚ್ಚು ಇಲ್ಲದೇ ಹೋದರೆ ಘೋರವಾದ ವಿಷವನ್ನು ಕುಡಿಯುತ್ತೇನೆ ಎಂದು ನಿರ್ಧರಿಸುತ್ತಾಳೆ.

ಮಾನ ರಕ್ಷಣೆಗೆ ಆಪತ್ತು ಬಂದಾಗ ಪ್ರಾಣತ್ಯಾಗಕ್ಕೂ ಮಹಿಳೆ ಸಿದ್ಧವಾಗುತ್ತಾಳೆ ಎಂಬ ಸೂಕ್ಷ್ಮ ಚಿಂತನೆ ಇಲ್ಲಿ ವ್ಯಕ್ತವಾಗಿದೆ.

5. ನೀನಲ್ಲದುಳಿದವರುಚಿತ ಬಾಹಿರರು.

ಪ್ರಸ್ತುತ ವಾಕ್ಯವನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿದ ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ. 3

ಕೀಚಕನಿಂದ ಉಪಟಳಕ್ಕೊಳಗಾದ ದ್ರೌಪದಿ ಭೀಮನೇ ತನ್ನ ಸಮಸ್ಯೆಗಳಿಗೆ ಪರಿಹಾರ ಸೂಚಿಸುವವನು ಎಂದು ಯೋಚಿಸಿ ಆತನ ಬಳಿ ಮಧ್ಯರಾತ್ರಿ ಧಾವಿಸುವಳು. ವಿರಾಟನ ಅಸ್ಥಾನದಲ್ಲಿ ಕೀಚಕನ ತುಳಿಯುವಿಕೆಯನ್ನು ಸೂಕ್ಷ್ಮವಾಗಿ ಭೀಮನಿಗೆ ವಿವರಿಸುವಳು. ತನ್ನ ಐವರು ಗಂಡಂದಿರಲ್ಲಿ ಭೀಮನೇ ಕೀಚಕನಿಂದ ಪಾರು ಮಾಡಲು ಸೂಕ್ತವ್ಯಕ್ತಿ ಎಂದು ಒಪ್ಪಿಸುವಳು.

ಸಂಕಟ ಸಮಯದಲ್ಲಿ ಹೆಣ್ಣಿನ ಚಾಣಾಕ್ಷತೆಯನ್ನು ಗಮನಿಸಬಹುದು.

6. ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು.

ಪ್ರಸ್ತುತ ವಾಕ್ಯವನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿದ ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ.

ದ್ರೌಪದಿ ಕೀಚಕನಿಂದಾದ ಅಪಮಾನವನ್ನು ತಾಳಲಾರದೆ, ತನ್ನ ಸುರಕ್ಷತೆಗೆ ಆತನ ವಧೆ ಅನಿವಾರ್ಯ ಎಂದು ಭೀಮನಿಗೆ ದುಂಬಾಲು ಬೀಳುತ್ತಾಳೆ. ಆಗ ಭೀಮನು ಕಷ್ಟಗಳನ್ನು ಬಂದಾಗ ಎದುರಿಸಲು ಮಾತ್ರ ನಾನು, ಉಳಿದವರು ಪ್ರೀತಿಸಲು ಮಾತ್ರ ಸಿದ್ಧರು ಎನ್ನುತ್ತಾ ಗಾದೆಯನ್ನು ಪ್ರಸ್ತಾಪಿಸುತ್ತಾನೆ. ,ಕೆಲವರು ಗಳಿಸಿದರೆ, ಕೆಲವರು ಉಂಡು ಜಾರುತ್ತಾರೆ'.

ಕಷ್ಟ ಪಡುವವರು ಕಷ್ಟಪಟ್ಟರೆ, ಕೆಲವರು ಸುಖವನ್ನು ಮಾತ್ರ ಅನುಭವಿಸುತ್ತಾರೆ ಎಂಬ ವಿಶ್ಲೇಷಣೆಯು ವ್ಯಕ್ತವಾಗಿದೆ.

7. ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ.

ಪ್ರಸ್ತುತ ವಾಕ್ಯವನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿದ ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ.

ದ್ರೌಪದಿಯು ಭೀಮನಲ್ಲಿ ಆಡುವ ಮಾತಿದು.

ಕೀಚಕನ ವಧಿಸಲು ಭೀಮನಲ್ಲಿ ಒತ್ತಾಯಿಸುವ ದ್ರೌಪದಿಗೆ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗುವುದಿಲ್ಲ. ಭೀಮನು ಅಣ್ಣನ ಆಜ್ಞೆಯನ್ನು ಮೀರಲು ಸಿದ್ಧನಾಗದ್ದನ್ನು ಕಂಡು ದ್ರೌಪದಿಗೆ ದುಃಖವಾಗುತ್ತದೆ. ಪತಿಯ ಜವಾಬ್ದಾರಿಯನ್ನು ವರ್ಣಿಸುತ್ತಾ, ಐವರು ಗಂಡಂದಿರಿದ್ದೂ ತನ್ನನ್ನು ರಕ್ಷಿಸಲಾರದ ಬಗ್ಗೆ ದುಃಖ ವ್ಯಕ್ತವಾಗಿ ಮೇಲಿನ ಮಾತನ್ನು ಆಡುತ್ತಾಳೆ.

8. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಭಂಗಿತರು
ಪ್ರಸ್ತುತ ವಾಕ್ಯವನ್ನು ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ. ಕೀಚಕನ ತೊಂದರೆಯಿಂದ ಭೀತಿಗೊಂಡ ದ್ರೌಪದಿ ಭೀಮನಲ್ಲಿ ಸಹಾಯವನ್ನು ಯಾಚಿಸುತ್ತಾಳೆ. ಅಜ್ಞಾತವಾಸದ ಸಮಯದ ಅಣ್ಣನ ಆಜ್ಞೆಯನ್ನು ಮೀರಲು ಸಾಧ್ಯವಿಲ್ಲ ಎಂಬಂತೆ ನುಡಿದ ಭೀಮನನ್ನು ಕಂಡು ತೀವ್ರ ದುಃಖಕ್ಕೊಳಗಾಗಿ ದ್ರೌಪದಿ ಈ ಮೇಲಿನ ಮಾತನ್ನು ಉಚ್ಚರಿಸುತ್ತಾಳೆ.
ದ್ರೌಪದಿಯ ತೀವ್ರ ಹತಾಶೆಯ ಮಾತು ಇಲ್ಲಿ ವ್ಯಕ್ತವಾಗಿದೆ.

9. ಕೂಳುಗೇಡಿಂಗೊಡಲ ಹೊರುವಿರಿ.
ಪ್ರಸ್ತುತ ವಾಕ್ಯವನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿದ ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ.
ದ್ರೌಪದಿಯು ಭೀಮನನ್ನು ರೊಚ್ಚಿಗೆಬ್ಬಿಸಲು ಆಡುವ ಮಾತಿದು.
ಕೀಚಕನ ಉಪಟಳದಿಂದ ತೀವ್ರವಾಗಿ ನೊಂದು ದಾರಿ ಕಾಣದೆ ಸಹಾಯ ಯಾಚಿಸುತ್ತಾ ಬಂದ ದ್ರೌಪದಿಗೆ ಸಹಾಯ ಮಾಡಲು ಅಣ್ಣನ ಆಜ್ಞೆಯನ್ನು ಎದುರಿಟ್ಟು ಭೀಮ ನಿರಾಕರಿಸುತ್ತಾನೆ. ದ್ರೌಪದಿ ಆತನನ್ನು ರೊಚ್ಚಿಗೆಬ್ಬಿಸಲು ಪ್ರಯತ್ನಿಸುತ್ತಾಳೆ. ತನ್ನ ದಯನೀಯ ಸ್ಥಿತಿಯನ್ನು ವರ್ಣಿಸುತ್ತಾ, ಪಾಂಡವರ ಶೌರ್ಯವನ್ನು ವರ್ಣಿಸುತ್ತಾ, ಅದನ್ನು ಬಳಸದ ಪಾಂಡವರಿಗೆ ತೋಳ ಹೊರೆಯೇಕೆ? ಎಂದು ಪ್ರಶ್ನಿಸಿ, ಹೊಟ್ಟೆ ಹೊರೆಯಲು ಮಾತ್ರ ಬದುಕುತ್ತಿದ್ದೀರಿ ಎಂದು ಛೇಡಿಸುತ್ತಾಳೆ.
ಪಾಂಡವರ ನಿಸ್ಸಾಹಯಕತೆಯನ್ನು ದೂಷಿಸುವ ದ್ರೌಪದಿಯ ಮನೋಭಾವ ವ್ಯಕ್ತವಾಗುತ್ತದೆ.

10. ಹಗೆಗಳನು ಹಿಂಡಿದನು ಮನದೊಳಗೆ
ಪ್ರಸ್ತುತ ವಾಕ್ಯವನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿದ ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆರಿಸಲಾದ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪದ್ಯಭಾಗದಿಂದ ಆರಿಸಲಾಗಿದೆ.
ಭೀಮನ ಮನದ ವರ್ತನೆಯನ್ನು ಕವಿ ಕುಮಾರವ್ಯಾಸ ಹೇಳಿದ್ದಾನೆ.
ಕೀಚಕನನ್ನು ವಧೆ ಮಾಡಿ ತನ್ನನ್ನು ರಕ್ಷಿಸುವಂತೆ ಕೋರಲು ಬಂದ ದ್ರೌಪದಿಗೆ ಭೀಮನು ಅಣ್ಣನ ಆಜ್ಞೆಯ ಮೀರಲಾಗದು ಎನ್ನುತ್ತಾ ಸಹಾಯ ಮಾಡಲು ನಿರಾಕರಿಸುತ್ತಾನೆ. ಆಗ ದ್ರೌಪದಿ ತಾನು ಅಪಮಾನಕ್ಕೊಳಗದ ಪ್ರಸಂಗಗಳನ್ನು ನೆನಪಿಸುತ್ತಾ 'ಕೂಳುಗೇಡಿಂಗೊಡಲ ಹೊರುವಿರಿ' ಎಂದು ಛೇಡಿಸುವಳು. ಆಗ ಭೀಮನು ಕಂಬನಿದುಂಬಿ, ರೋಷ ಹೆಚ್ಚಿ 'ಹಗೆಗಳನು ಹಿಂಡಿದನು ಮನದೊಳಗೆ' .
ಯುದ್ಧವು ಮೊದಲು ಮನದಲ್ಲಿ ನಡೆಯುತ್ತದೆ ಎಂಬ ಈ ವಾಕ್ಯವು ಧ್ವನಿಸುತ್ತದೆ.

ಆ. ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ.)
1. ಧರ್ಮರಾಯನಿಗೆ ಎಂಥ ಗರ ಹೊಡೆದಿದೆ?
ಧರ್ಮರಾಯನಿಗೆ ಧರ್ಮಕ್ಷಮೆಯ ಗರ ಹೊಡೆದಿದೆ.

2. ಅಣ್ಣನಾಜ್ಞೆಯಲ್ಲಿ ಭ್ರಮಿತನಾದವನು ಯಾರು?
ಅಣ್ಣನಾಜ್ಞೆಯಲ್ಲಿ ಭ್ರಮಿತನಾದವನು ಅರ್ಜುನ.

3. ಪಾಂಚಾಲನಂದನೆ ಯಾರು?
ಪಾಂಚಾಲನಂದನೆ ದ್ರೌಪದಿ.

4. ರಾಜಸಭೆಯೊಳಗೆ ದ್ರೌಪದಿಯನ್ನು ಒದೆದವರು ಯಾರು?
ರಾಜಸಭೆಯೊಳಗೆ ದ್ರೌಪದಿಯನ್ನು ಒದೆದವರು ಕೀಚಕ.

5. ಯಾರನ್ನು ಯಮಲೋಕಕ್ಕೆ ಕಳಿಸಲು ದ್ರೌಪದಿ ಭೀಮನಿಗೆ ಹೇಳುತ್ತಾಳೆ?
ಕೀಚಕನನ್ನು ಯಮಲೋಕಕ್ಕೆ ಕಳಿಸಲು ದ್ರೌಪದಿ ಭೀಮನಿಗೆ ಹೇಳುತ್ತಾಳೆ.

6. 'ಗಂಡರೋ ನೀವ್ ಭಂಡರೋ' ಎಂದು ಕೇಳಿದವರಾರು?
'ಗಂಡರೋ ನೀವ್ ಭಂಡರೋ' ಎಂದು ಕೇಳಿದವರು ದ್ರೌಪದಿ.

7. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಎಂದವರಾರು?
ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಎಂದವರು ದ್ರೌಪದಿ.

8. ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದೊಯ್ದವರಾರು?
ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದೊಯ್ದವರು ಸೈಂಧವ.

9. ಮನದೊಳಗೆ ಹಗೆಗಳನು ಹಿಂಡಿದವರಾರು?
ಮನದೊಳಗೆ ಹಗೆಗಳನು ಹಿಂಡಿದವರು ಭೀಮ.

10. ಯಾರ ಬಸುರನ್ನು ಬಗೆಯುವುದಾಗಿ ಭೀಮ ಹೇಳುತ್ತಾನೆ?
ಕೀಚಕನ ಬಸುರನ್ನು ಬಗೆಯುವುದಾಗಿ ಭೀಮ ಹೇಳುತ್ತಾನೆ.

ಇ. ಎರಡು ಅಂಕಗಳ ಪ್ರಶ್ನೆಗಳು
1. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ?
ಕೀಚಕನಿಂದ ತನ್ನನ್ನು ರಕ್ಷಿಸಲು ತನ್ನ ಪತಿಗಳೈವರಲ್ಲಿ ಸಮರ್ಥರಾದವರ ಬಗ್ಗೆ ದ್ರೌಪದಿ ತರ್ಕಿಸುತ್ತಾಳೆ. ಧರ್ಮರಾಯನಿಗೆ ಧರ್ಮಕ್ಷಮೆಯೆಂಬ ಗ್ರಹ ಹೊಡೆದಿದ್ದರೆ, ಅರ್ಜುನನು ಅಣ್ಣನ ಆಜ್ಞೆಯಿಂದ ಭ್ರಮಿತನಾಗಿದ್ದಾನೆ. ನಕುಲ ಸಹದೇವರು ಕೀಚಕನನ್ನು ಕೊಲ್ಲಲು ಅಕ್ಷಮರೆಂದು ದ್ರೌಪದಿ ಹೇಳಿದ್ದಾಳೆ.

2. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?
ಕೀಚಕನಿಂದ ಪಾರುಮಾಡಲು ತನ್ನ ಪತಿಗಳೈವರಲ್ಲಿ ಭೀಮನೇ ಸಮರ್ಥ ಎಂದು ದ್ರೌಪದಿ ತೀರ್ಮಾನಿಸುತ್ತಾಳೆ. ಆಕೆ ಮಲಗಿರುವ ಭೀಮನ ಬಳಿ ಸಾರಿ, ಮೆಲ್ಲಮೆಲ್ಲನೆ ಮುಸುಕ ಸಡಿಲಿಸಿ, ಗಲ್ಲವನ್ನು ಹಿಡಿದು ಅಲುಗಿಸಿ ಎಬ್ಬಿಸಿದಳು.

3. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ?
ಭೀಮನು ಪರಾಕ್ರಮಿಯಾಗಿದ್ದು ತನ್ನ ಬಗ್ಗೆ ಅತೀವ ಕಾಳಜಿಯನ್ನು ಹೊಂದಿರುವವನು ಎಂದು ದ್ರೌಪದಿ ಯೋಚಿಸುತ್ತಾಳೆ. ಕೀಚಕನ ದುಷ್ಟತನವನ್ನು ಆತನಿಗೆ ತಿಳಿಸಲು ನಿರ್ಧರಿಸುತ್ತಾಳೆ. ಭೀಮನಲ್ಲಿ ಕೀಚಕನನ್ನು ಕೊಲ್ಲುವ ಸಾಮರ್ಥ್ಯ ಇರದಿದ್ದರೆ ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಹೇಳುತ್ತಾಳೆ.

4. ಉಳಿದ ನಾಲ್ವರು ಪಾಂಡವರ ಬಗ್ಗೆ ದ್ರೌಪದಿಯ ಅಭಿಪ್ರಾಯವೇನು?
ಉಳಿದ ಪಾಂಡವರು ಸುಖಕ್ಕಾಗಿ ತನ್ನ ಬಳಿ ಬರುತ್ತಾರೆ. ಆದರೆ ಮಾನದ ವಿಷಯ ಬಂದಾಗ ನಿರ್ಗಮಿಸುತ್ತಾರೆ. ಸಂಕಟದ ಸಮಯದಲ್ಲಿ ಉಳಿದ ಪಾಂಡವರು ಸಹಾಯ ಮಾಡುವುದಿಲ್ಲ. ಭೀಮನೊಬ್ಬನೇ ತನ್ನ ಸಹಾಯಕ್ಕೆ ನಿಲ್ಲುವವನು ಎಂದು ದ್ರೌಪದಿ ಅಭಿಪ್ರಾಯಪಡುತ್ತಾಳೆ.

5. ಗಂಡರೈವರು ಮೂರು ಲೋಕದ ಗಂಡರಾರು? ಹೆಸರಿಸಿ
ಪಂಚ ಪಾಂಡವರಾದ ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವರು ದ್ರೌಪದಿಯ ಗಂಡರೈವರು. ಮೂರು ಲೋಕಗಳಲ್ಲಿ ಪರಾಕ್ರಮಿಗಳಾದವರು.

6. ಹೆಂಡತಿಯ ಹರಿಬಕ್ಕಾಗಿ ಗಂಡುಕೂಸು ಏನು ಮಾಡುತ್ತಾನೆ?
ಹೆಂಡತಿಯ ರಕ್ಷಣೆಗಾಗಿ ಗಂಡುಕೂಸು ವೈರಿಯನ್ನು ಕಡಿದು ತುಂಡು ಮಾಡುವನು. ಇಲ್ಲದಿದ್ದರೆ ತನ್ನ ಪ್ರಾಣವನ್ನೇ ನೀಡುವನು.

ಈ. ನಾಲ್ಕು ಅಂಕಗಳ ಪ್ರಶ್ನೆಗಳು
1. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?
ಅಜ್ಞಾತವಾಸದ ಸಂದರ್ಭದಲ್ಲಿ ಪಾಂಡವರು ವೇಷ ಮರೆಸಿಕೊಂಡು ವಿರಾಟರಾಜನ ಅರಮನೆಯಲ್ಲಿ ವಿವಿಧ ವೃತ್ತಿಗಳಲ್ಲಿ ಇರುತ್ತಾರೆ. ರಾಣಿ ಸುದೇಷ್ಣೆಯ ತಮ್ಮನಾದ ಕೀಚಕನಿಂದ ದ್ರೌಪದಿ ಸಂಕಟಕ್ಕೆ ಒಳಗಾಗುತ್ತಾಳೆ. ಇದರಿಂದ ಆಕೆ ತೀವ್ರ ತಲ್ಲಣಕ್ಕೆ ಒಳಗಾಗುತ್ತಾಳೆ.
'ತನ್ನ ಸಂಕಟವನ್ನು ಯಾರಿಗೆ ಹೇಳಲಿ? ಯಾರನ್ನು ಸಮೀಪಿಸಲಿ? ಯಾರನ್ನು ಬೇಡಲಿ? ಈ ಹೆಂಗಸು ಜನ್ಮವೇ ಬೇಡ. ನನ್ನಂತೆ ಈ ಹಿಂದೆ ಯಾರು ನರಳಿದ್ದಾರೆ? ಮರಣವೂ ಬಾರದು' ಎಂದು ಹೊಟ್ಟೆಯನ್ನು ಹೊಡೆದುಕೊಂಡು ದ್ರೌಪದಿ ಗೋಳಿಡುತ್ತಾಳೆ.
ಕವಿ ಕುಮಾರವ್ಯಾಸನು ದ್ರೌಪದಿಯ ಸಂಕಟವನ್ನು ಈ ರೀತಿ ಹಿಡಿದಿಟ್ಟಿದ್ದಾನೆ.

2. ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.
ಅಜ್ಞಾತವಾಸದ ಸಂದರ್ಭದಲ್ಲಿ ಕೀಚಕನಿಂದಾದ ಅವಮಾನವನ್ನು ದ್ರೌಪದಿ ಭೀಮನಲ್ಲಿ ಹೇಳಿಕೊಳ್ಳಲು ಆತನನ್ನು ಎಬ್ಬಿಸುವಳು.
ರಾಜಸಭೆಯಲ್ಲಿ ಕೀಚಕ ಒದೆದ ಪ್ರಸಂಗವನ್ನು ವಿವರಿಸುತ್ತಾ, ಆತನನ್ನು ಕೊಂದು ತನ್ನನ್ನು ರಕ್ಷಿಸುವಂತೆ ಕೋರುವಳು. ಇಲ್ಲವಾದರೆ ತಾನು ಬದುಕಲಾರೆ ಎನ್ನುವಳು.
ಉಳಿದ ನಾಲ್ವರು ಪಾಂಡವರು ರಮಿಸಿದರೂ, ಮಾನದ ವಿಷಯ ಬಂದಾಗ ನಿರ್ಗಮಿಸುವರು. ನಿನ್ನಿಂದ ಮಾತ್ರ ನನ್ನ ರಕ್ಷಣೆ ಸಾಧ್ಯ. ತನ್ನ ಬಗ್ಗೆ ಕನಿಕರ ತೋರಿ ಕೀಚಕನನ್ನು ವಧಿಸಲು ಕೋರುವಳು.

3. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು?
ಕೀಚಕನನ್ನು ವಧಿಸಲು ನಿರಾಕರಿಸಿದ ಭೀಮನಿಗೆ ದ್ರೌಪದಿಯು ತನ್ನ ಅಸಹಾಯಕತೆಯನ್ನು ವರ್ಣಿಸಿದಾಗ ಭೀಮನು ದುಃಖಿತನಾಗುವನು.
ದ್ರೌಪದಿಯ ಕುರುಳ ನೇವರಿಸಿ, ಗಲ್ಲವ ಒರೆಸಿ ಮುದ್ದಾಡಿದನು. ಆಕೆಯ ಮುಖವನ್ನು ನೀರಲ್ಲಿ ತೊಳೆದು ಅಣ್ಣನ ಆಜ್ಞೆಯನ್ನು ಮೀರಿದೆ, ಸಿಟ್ಟು ಮಾಡದಿರು ಎನ್ನುವನು.
ಕೀಚಕನ ಬಸುರನ್ನೇ ಬಗೆಯುವೆನು. ವಿರಾಟ ವಂಶದ ಹೆಸರನ್ನು ತೊಡೆಯುವನು. ಕೌರವರು ನಮ್ಮ ಗುರುತು ಹಿಡಿದರೆ ಅವರನ್ನು ಚೂರಾಗಿ ಕತ್ತರಿಸುವೆನು. ಭೀಮನಿಂದ ತೊಂದರೆಯಾಯಿತೆಂದರೆ ದೇವಲೋಕದಲ್ಲಿ ಅವರ ಮುಖವನ್ನು ತೇವೆನು ಎಂದು ನಿಶ್ಚಿಂತೆಯಿಂದಿರಲು ತಿಳಿಸುತ್ತಾ ಕೀಚಕನನ್ನು ವಧಿಸುವ ಭರವಸೆ ನೀಡುತ್ತಾನೆ.

4. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

ಕೀಚಕನ ಉಪಟಳದಿಂದ ದುಃಖಿತಳಾದ ದ್ರೌಪದಿ ಹತಾಶಳಾಗಿ ಭೀಮನ ಸನ್ನಿಧಾನಕ್ಕೆ ಧಾವಿಸುವಳು. ಭೀಮನು ಕೀಚಕನ ಬಗ್ಗೆ ಕೋಪಗೊಂಡರೂ, ಅಣ್ಣನ ಆಜ್ಞೆಯನ್ನು ಮೀರಲು ಹಿಂಜರಿಯುತ್ತಾನೆ. ಲೋಕದ ಅಪವಾದಕ್ಕೆ ಗುರಿಯಾಗುವ ಭೀತಿಯಿಂದ ದ್ರೌಪದಿಗೆ ಸಹಾಯ ಮಾಡಲು ಮುಂದೆ ಬರದಿದ್ದಾಗ ದ್ರೌಪದಿ ಬಲು ದುಃಖಕ್ಕೆ ಒಳಗಾಗುತ್ತಾಳೆ.

ದ್ಯೂತದ ಸಂದರ್ಭದಲ್ಲಿ ದ್ರೌಪದಿಯನ್ನು ತುಂಬಿದ ಸಭೆಗೆ ದುರ್ಯೋಧನನು ಮುಂದಲೆ ಹಿಡಿದು ದುಶ್ಯಾಸನನಿಂದ ಎಳೆತಂದ ಘಟನೆಯನ್ನು ನೆನಪಿಸುತ್ತಾಳೆ.

ಅರಣ್ಯವಾಸದಲ್ಲಿ ಸೈಂಧವನು ಕೌರವರಿಗೆ ಸಹಾಯಮಾಡಲು ಎಳೆದೊಯ್ದ ಪ್ರಸಂಗ ನೆನೆದು ದುಃಖಿತಳಾಗುತ್ತಾಳೆ.

ಇದೀಗ ವಿರಾಟ ರಾಜನ ಓಲಗದಲ್ಲಿ ಕೀಚಕನು ಕಾಲಿನಲ್ಲಿ ಒದೆದು ಅಪಮಾನಿಸಿದ್ದಾನೆ.

ದ್ರೌಪದಿ ಈ ಮೂರು ಪ್ರಸಂಗಗಳನ್ನು ನೆನೆದು ರೋಧಿಸುತ್ತಾಳೆ.

5. ಈ ಕಾವ್ಯಭಾಗದಲ್ಲಿ ಮೂಡಿಬಂದಿರುವ ಭೀಮ – ದ್ರೌಪದಿಯವರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

ಕೀಚಕನ ಉಪಟಳದಿಂದ ದುಃಖಿತಳಾದ ದ್ರೌಪದಿ ಭೀಮನ ಸಹಾಯ ಕೋರಿ ಆತನಲ್ಲಿ ಧಾವಿಸಿ ಎಬ್ಬಿಸುತ್ತಾಳೆ. ಭೀಮ ಸಾವಧಾನದಲ್ಲಿ ಆಕೆಯ ತಲ್ಲಣವನ್ನು ವಿಚಾರಿಸುತ್ತಾನೆ. ದ್ರೌಪದಿ ರಾಜನ ಓಲಗದಲ್ಲಿ ಬೆನ್ನಟ್ಟಿ ಒದೆದ ಕೀಚಕನ ಕುರಿತು ವಿವರಿಸುತ್ತಾ ಆತನ ಸಾವನ್ನು ಬಯಸುತ್ತಾಳೆ.

ಉಳಿದ ನಾಲ್ವರು ಪಾಂಡವರು ಸುಖಕ್ಕಾಗಿ ನನ್ನ ಬಳಿ ಬರುವರು. ಮಾನದ ವಿಷಯ ಬಂದಾಗ ನಿರ್ಗಮಿಸುವರು. ನನಗೆ ಸಹಾಯ ಮಾಡಲು ಭೀಮ ಮಾತ್ರ ಯೋಗ್ಯ ಎಂದಾಗ ಭೀಮ ಕೀಚಕನ ಮೇಲೆ ಸಿಟ್ಟುಗೊಂಡರೂ ಅಣ್ಣನ ಆಜ್ಞೆಯನ್ನು ಮೀರಲಾರದೆ ದ್ರೌಪದಿಗೆ ಸಹಾಯ ಮಾಡಲು ಹಿಂಜರಿಯುತ್ತಾನೆ.

ವೀರನಾದವನು ತನ್ನ ವೈರಿಯನ್ನು ತುಂಡಾಗಿ ಕತ್ತರಿಸುತ್ತಾನೆ. ಇಲ್ಲವೇ ತನ್ನ ಪ್ರಾಣವನ್ನೇ ಅರ್ಪಿಸುತ್ತಾನೆ. ತನ್ನನ್ನು ರಕ್ಷಿಸಲಾರದ ವೀರರಾದ ಪಾಂಡವರಿಗೆ 'ಗಂಡರೋ ನೀವ್ ಭಂಡರೋ' ಎಂದು ಛೇಡಿಸುತ್ತಾ ಪ್ರಚೋದಿಸುತ್ತಾಳೆ.

ದುರ್ಯೋಧನ, ಸೈಂಧವ, ಕೀಚಕನಿಂದಾದ ಅಪಮಾನಗಳನ್ನು ನೆನಪಿಸಿಕೊಂಡು ಅಳುತ್ತಾ ದ್ರೌಪದಿ 'ಕೂಳುಗೇಡಿಂಗೊಡಲ ಹೊರುವಿರಿ' ಎಂದು ಹೀನಾಯ ಮಾಡಿದಾಗ ಭೀಮ ಆಕೆಯ ಮಾತಿನಂತೆ ಕೀಚಕನನ್ನು ಕೊಲ್ಲುವ ಭರವಸೆಯನ್ನು ನೀಡುತ್ತಾನೆ.

ಪತಿಯ ಶೌರ್ಯವನ್ನು ಪ್ರಚೋದಿಸಿ ಕಾರ್ಯಸಾಧಿಸುವ ದ್ರೌಪದಿಯ ಚಾಣಾಕ್ಷತೆ ಇಲ್ಲಿ ವ್ಯಕ್ತವಾಗಿದೆ.

**************